ಒ ಎಸ್ ನಂ. 24/2016

ಡಿ ಡಬ್ಲ್ಯೂಃ 2

ದಿನಾಂಕಃ 02-03-2026

ಈ ದಿನದಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಎಸ ಡಿ ವಾದಿಯ ಪರ ವಕೀಲರಿಂದ**

ಈ ದಾವೆಯನ್ನು ಎಷ್ಟು ಜನರು ಎಷ್ಟು ಜನರ ವಿರುದ್ಧ ದಾಖಲಿಸಿದ್ದಾರೆ ಎಂಬುದು ಗೊತ್ತಿಲ್ಲ. ಏನು ಪರಿಹಾರ ಕೋರಿ ದಾಖಲಿಸಿದ್ದಾರೆ ಎಂಬುದು ಗೊತ್ತಿಲ್ಲ. ಎಷ್ಟು ಆಸ್ತಿಗಳ ಕುರಿತು ದಾವೆ ಸಲ್ಲಿಸಿದ್ದಾರೆ ಎಂಬುದು ಗೊತ್ತಿಲ್ಲ. ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಜರು ಪಡಿಸಿದ ನಿಡಿಃ 16 ಖರೀದಿ ಪತ್ರ ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವು ದಂಡಾಪೂರ ಗ್ರಾಮದ ಸರ್ವೆ ನಂ.267/2 ಅ/1 ಆಸ್ತಿಯ ಕುರಿತು ಆಗಿದೆ. ಸದರಿ ಆಸ್ತಿಯ ಪೂರ್ವಕ್ಕೆ ಅಪ್ಪಣ್ಣಾ ದಂಡಿನವರರವರ ಜಮೀನು, ಪಶ್ಚಿಮಕ್ಕೆ ಕೆರೆ, ಉತ್ತರಕ್ಕೆ ಸರ್ವೆ ನಂ.268 ಜಮೀನು, ದಕ್ಷಿಣಕ್ಕೆ ರಸ್ತೆ ಇದೆ. ನಿಡಿಃ16 ಖರೀದಿ ಪತ್ರದಲ್ಲಿ ಪೂರ್ವಕ್ಕೆ ಅಪ್ಪಣ್ಣಾ ದಂಡಿನವರರವರ ಜಮೀನು ಮತ್ತು ಪಶ್ಚಿಮಕ್ಕೆ ಕೆರೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರಗಳನ್ನು ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ಮೇಲೆ ತಿಳಿಸಿದ ಚೆಕಬಂದಿ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಆಸ್ತಿಯ ಕುರಿತು ನಾನು ಪರಿಶೀಲಿಸಿದ ದಾಖಲೆಗಳ ಪ್ರಕಾರ ಸದರಿ ಆಸ್ತಿಯು ಅನಸವ್ವರವರ ದಾನಪತ್ರದ ಪ್ರಕಾರ 5 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಸದರಿ ಆಸ್ತಿಯ ಕುರಿತು ದಾನಪತ್ರ ಬರೆದುಕೊಡಲು ಅನಸವ್ವರವರಿಗೆ ಹಕ್ಕು ಇತ್ತಾ ಎಂಬ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂದು ಕೇಳಲು ಸಾಕ್ಷಿಯು ಋಣಭಾರ ಪ್ರಮಾಣ ಪತ್ರ ಮತ್ತು ಇತರ ಎಲ್ಲ ಅವಶ್ಯಕ ದಾಖಲೆಗಳನ್ನು ಪರಿಶೀಲಿಸಿ ಆಸ್ತಿ ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ. ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿ ಆಸ್ತಿ ಖರೀದಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಚಿಕ್ಕೊಪ್ಪರವರ ಮನೆತನಕ್ಕೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಬಸಪ್ಪ ಚಿಕ್ಕೊಪ್ಪ ಎಂಬುವವರಿಗೆ ಚಂದ್ರಶೇಖರ, ವೀರುಪಾಕ್ಷಪ್ಪ ಮತ್ತು ಮಹಾಂತವ್ವ ಎಂಬ ಮಕ್ಕಳು ಇದ್ದರು ಎಂಬುದು ಗೊತ್ತಿಲ್ಲ. ಸದರಿ ಮಹಂತವ್ವರವರ ಮಗಳು ವಾದಿ ಎಂಬುದು ಗೊತ್ತಿಲ್ಲ. ಮಹಾಂತವ್ವರವರಿಗೆ ತಿಳಿಸದೆ ಚಂದ್ರಶೇಖರ ಮತ್ತು ವೀರುಪಾಕ್ಷಪ್ಪ ದಾವಾ ಆಸ್ತಿಗೆ ತಮ್ಮ ಹೆಸರು ದಾಖಲಿಸಿಕೊಂಡಿದ್ದರು ಎಂಬುದು ಗೊತ್ತಿಲ್ಲ. ದಾವಾ ಆಸ್ತಿಯ ಕುರಿತು

ಇಲ್ಲಿಯವರೆಗೆ ಪಾಲು ವಾಟನಿ ಆಗಿಲ್ಲ ಎಂಬುದು ಗೊತ್ತಿಲ್ಲ. ದಾವಾ ಆಸ್ತಿಯ ಕುರಿತು 5 ನೇ ಪ್ರತಿವಾದಿಯ ಪರವಾಗಿ ದಾನಪತ್ರ ಬರೆದುಕೊಡುವ ಯಾವುದೇ ಅಧಿಕಾರ ವೀರುಪಾಕ್ಷಪ್ಪ ಮತ್ತು ಅನಸವ್ವರವರಿಗೆ ಇರಲಿಲ್ಲ ಎಂಬುದು ಗೊತ್ತಿಲ್ಲ. 5 ನೇ ಪ್ರತಿವಾದಿಯು ಸದರಿ ದಾನಪತ್ರವನ್ನು ಸೃಷ್ಟಿಸಿದ್ದಾನೆ ಎಂದರೆ ಸರಿಯಲ್ಲ. ವೀರುಪಾಕ್ಷಪ್ಪ ಮತ್ತು ಅನಸವ್ವರವರನ್ನು ನಾನು ನೋಡಿಲ್ಲ. 5 ನೇ ಪ್ರತಿವಾದಿಯು ಸಂಬಂಧದಲ್ಲಿ ವೀರುಪಾಕ್ಷಪ್ಪನ ಮೊಮ್ಮಗನಾಗಬೇಕು ಹಾಗೂ ಆತನೇ ವೀರುಪಾಕ್ಷಪ್ಪನ ಯೋಗಕ್ಷೇಮ ನೋಡಿಕೊಂಡಿರುತ್ತಾನೆ. 5 ನೇ ಪ್ರತಿವಾದಿಯ ಮತ್ತು ವೀರುಪಾಕ್ಷಪ್ಪನ ಸಂಬಂಧದ ಬಗ್ಗೆ ನಿಖರ ಮಾಹಿತಿ ಇಲ್ಲ. 5 ನೇ ಪ್ರತಿವಾದಿಯೇ ವೀರುಪಾಕ್ಷಪ್ಪನ ಯೋಗಕ್ಷೇಮ ನೋಡಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿಯು ಹುನಗುಂದ ತಾಲ್ಲೂಕಿನ ಚಿಕ್ಕಬಾಗವಾಡಗಿ ಗ್ರಾಮದವರು ಎಂದರೆ ಸಾಕ್ಷಿಯು ಮೊದಲು ನರಗುಂದದಲ್ಲಿಯೇ ವಾಸವಾಗಿದ್ದು, ಈಗ ಸದರಿ ಗ್ರಾಮಕ್ಕೆ ಹೋಗಿದ್ದಾರೆ ಎಂದು ನುಡಿಯುತ್ತಾರೆ. ನಿಡಿ 16 ಕ್ರಯಪತ್ರದಲ್ಲಿ 5 ನೇ ಪ್ರತಿವಾದಿಯ ವಿಳಾಸ ಚಿಕ್ಕಬಾದವಾಡಗಿ ಗ್ರಾಮ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅವರ ಅಜ್ಜ, ಅಜ್ಜಿ ಮೃತಪಟ್ಟ ನಂತರ ಸದರಿ ಗ್ರಾಮಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಈಗ 5 ನೇ ಪ್ರತಿವಾದಿಯು ಸದರಿ ಗ್ರಾಮದಲ್ಲಿಯೇ ವಾಸವಾಗಿದ್ದಾನೆ ಎಂದರೆ ಸರಿ. 5 ನೇ ಪ್ರತಿವಾದಿಯ ಅಜ್ಜ-ಅಜ್ಜಿ ಮೃತಪಟ್ಟ ವರ್ಷ ಗೊತ್ತಿಲ್ಲ. 5 ನೇ ಪ್ರತಿವಾದಿಯ ದಾನಪತ್ರದ ಅಸಲು ಪ್ರತಿಯನ್ನು ನಾನು ನೋಡಿರುವುದಿಲ್ಲ, xerox ಪ್ರತಿ ನೋಡಿದ್ದೇನೆ. ಅಸಲು ಪ್ರತಿ ನೋಡಲು ಪ್ರಯತ್ನಿಸಿಲ್ಲ ಎಂದರೆ ಸರಿ.

ನಾನು ಆಸ್ತಿ ಖರೀದಿಸುವ ಸಮಯದಲ್ಲಿ ಈ ದಾವೆ ವಿಚಾರಣೆಗೆ ಇತ್ತು ಎಂದರೆ ಸಾಕ್ಷಿಯು ಆ ಬಗ್ಗೆ ತಮಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ಖರೀದಿಸುವ ಮುಂಚೆ ದಿನಪತ್ರಿಕೆಯಲ್ಲಿ ಸಾರ್ವಜನಿಕ ನೋಟಿಸ ನೀಡಿರುವುದಿಲ್ಲ. ಸದರಿ ಆಸ್ತಿಯ ಮೇಲೆ ಹಕ್ಕು ಮತ್ತು ಭೋಜಾ ಇರುವ ಬಗ್ಗೆ ವಿಚಾರಣೆ ಮಾಡಿದ್ದೇನೆ. ಆ ಕುರಿತು ಪಕ್ಕದ ಜಮೀನಿನ ಮಾಲೀಕರಾದ ಅಪ್ಪಣ್ಣ ದಂಡಿನವರರವರನ್ನು ವಿಚಾರಣೆ ಮಾಡಿದ್ದೇನೆ. ಸದರಿಯವರು ಯಾರಿಂದ ಜಮೀನನ್ನು ಖರೀದಿಸಿದ್ದಾರೆ ಎಂಬ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ದಾವಾ ಆಸ್ತಿಯ ಕುರಿತು ಅಪ್ಪಣರವರನ್ನು ವಿಚಾರಣೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನರಗುಂದ ಪಟ್ಟಣದ ಖಾಯಂ ರಹವಾಸಿ ಎಂದರೆ ಸರಿ. ನಿಡಿಃ 16 ಕ್ರಯಪತ್ರಕ್ಕೆ ನರಗುಂದ ಪಟ್ಟಣದ ಯಾವುದೇ ವ್ಯಕ್ತಿ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವೆಯ ಬಗ್ಗೆ 5 ನೇ ಪ್ರತಿವಾದಿಯು ನನಗೆ ಸಂಪೂರ್ಣ ಮಾಹಿತಿ ನೀಡಿದ್ದನು ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಮಾಹಿತಿ ಇದ್ದರೂ ಸಹ ಮಾಹಿತಿ ಇರಲಿಲ್ಲ ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿಯ ವಾದಿಯ ಹಿಸ್ಸೆಯನ್ನು ನಷ್ಟ ಮಾಡುವ ಉದ್ದೇಶದಿಂದ 5 ನೇ ಪ್ರತಿವಾದಿಯೊಂದಿಗೆ ಸೇರಿ ಸುಳ್ಳು ಖರೀದಿ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜಾ ಹೊಂದಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದು ಕೇಳಲು ಸಾಕ್ಷಿಯು ಯಾವ ದಾಖಲೆಗಳನ್ನು ಹಾಜರು ಪಡಿಸಬೇಕೆಂಬ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನೇ ದಾವಾ ಆಸ್ತಿಯ ಕಬ್ಜಾ ಹೊಂದಿದ್ದೇನೆ ಎಂದು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲ ವಿಷಯಗಳು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 5 ನೇ ಪ್ರತಿವಾದಿಯ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು, ನರಗುಂದ